# ಸುಮ್ಮನೆ ಬರುವುದೆ ಮುಕ್ತಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi. These are mentioned in yellow highlights.
2. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchhu Rayaru. Here, the lyrics are completely different. And there are 3 stanzas only. They are given separately in green highlights.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao. In this book, lyrics are not complete. It is upto stanza 3 only. But matches with the Ref. 2.
4. **Note:** The singer has followed the wordings in Ref. 1.

ರಾಗ ಆನಂದ ಭೈರವಿ ತಾಳ ಅಟ್ಟ

ಸುಮ್ಮನೆ ಬರುವದೆ ಮುಕ್ತಿ || ಪ ||
ನಮ್ಮ ಅಚ್ಯುತಾನಂತನ ನೆನೆಯದೆ ಭಕ್ತಿ || ಅಪ ||

ಮನದಲ್ಲಿ ದೃಢವಿರಬೇಕು, ಪಾಪಿ
ಜನರ ಸಂಸರ್ಗವ ನೀಗಲು ಬೇಕು
ಅನುಮಾನವನು ಬಿಡಬೇಕು, ತನ್ನ
ತನು ಮನ ಧನವನೊಪ್ಪಿಸಿಕೊಡಬೇಕು || 1 ||

ಕಾಮಕ್ರೋಧವ ಬಿಡಬೇಕು, ಪರ-
ಕಾಮಿನಿಯರ ಹಂಬಲ ಬಿಡಬೇಕು
ಹೇಮದಾಸೆಯ ಸುಡಬೇಕು, ಹರಿ-
ನಾಮ ಸಂಕೀರ್ತನೆಯನು ಮಾಡಬೇಕು || 2 ||

ಸಂದಣಿಗಳ ಬಿಡಬೇಕು, ದೇಹ
ಬಂಧು ಬಾಂಧವರ ಸ್ನೇಹವ ಬಿಡಬೇಕು
ನಿಂದಿಸಿದರೆ ಹಿಗ್ಗಬೇಕು, ಕೋಪ
ಬಂದಾಗ ಸೈರಣೆ ಬಿಡದಿರಬೇಕು || 3 ||

ಹರಿಯೇ ಗುರುವೆನ್ನಬೇಕು, ಶ್ರೀ-

ರಾಗ: ಆನಂದ ಭೈರವಿ ತಾಳ: ಅಟ್ಟ

ಸುಮ್ಮನೆ ಬಾಹೋದೆ ಮುಕುತಿ ನಮ್ಮ
ಚೆನ್ನಾದಿಕೇಶವನ ದಯವಾಗದನಕ

ಮನದಲ್ಲಿ ದೃಢವಿರಬೇಕು, ದುರ್
ಜನರ ಸಂಗತಿಯನು ನೀಗಲುಬೇಕು
ಅನುಮಾನಂಗಳ ಬಿಡಬೇಕು ತನ್ನ
ತನು ಮನ ಹರಿಗೆ ಒಪ್ಪಿಸಿಕೊಡಬೇಕು

ಕಾಮ ಕ್ರೋಧವ ಬಿಡಬೇಕು ಹರಿ
ನಾಮ ಸಂಕೀರ್ತನೆ ಮಾಡಲು ಬೇಕು
ಹೇಮದಾಸೆಯ ಸುಡಬೇಕು ತ-
ನ್ನ ಮನ ಹರಿಯ ಪಾದದಲಿಡಬೇಕು

ಪಾಪಗಳನೆ ಕಳೆಯಬೇಕು ಜ್ಞಾನ
ದೀಪ ಬೆಳಕಿನಲಿ ಲೋಲಾಡಬೇಕು
ತಾಪ ರಹಿತಗೈಯಬೇಕು ನಮ್ಮ
ಒಪ ಪುರಂದರ ವಿಠ್ಠಲನೊಲೆಯಬೇಕು

ಹರಿಯೇ ಪರದೈವವೆಂತೆನ್ನಬೇಕು
ಪರವಸ್ತು ಒಲ್ಲೆನಬೇಕು, ದೇಹ
ಸ್ಥಿರವಲ್ಲವೆಂತೆಂದು ತಿಳಿಯಲು ಬೇಕು || 4 ||

ವ್ಯಾಪಾರವನು ಬಿಡಬೇಕು, ನಮ್ಮ
ಶ್ರೀಪತಿ ಪುರಂದರ ವಿಠಲೆನ್ನಬೇಕು
ಪಾಪ ರಹಿತನಾಗಬೇಕು, ಜ್ಞಾನ
ದೀಪದ ಬೆಳಕಿಲಿ ಓಡಾಡಬೇಕು || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಮುಕ್ತಿ, ಮುಕ್ತಿ ಎಂದು ಹಂಬಲಿಸುವ ಮಾನವರಿಗೆ ಮುಕ್ತಿಯು ಸಹಜವಾಗಿ ದೊರೆಯುವುದೆ? - ಎಂದು ದಾಸರು ಕೇಳಿ, ಅದಕ್ಕೆ ಮಾಡಬೇಕಾದ ಸಾಧನೆಯನ್ನು ಇಲ್ಲಿ ವಿವರಿಸಿದ್ದಾರೆ. ಭಕ್ತಿಯು ಬೇರೂರಲು ಅಗ್ಯವಾದ ಸಾಧನೆಗಳನ್ನು ಇಲ್ಲಿ ಒಕ್ಕಣಿಸಿದ್ದಾರೆ.

**ಸಂಸರ್ಗ** = ಸಂಪರ್ಕ, ಸಹವಾಸ

**ಹೇಮದಾಸೆ** – ಹೊನ್ನಿನ ಆಸೆ, ಎಂದರೆ ಐಶ್ವರ್ಯವನ್ನು ಗಳಿಸುವ ಬಯಕೆ.

**ಸಂದಣಿ** – ಜನರ ಗುಂಪು (ಭಗವದ್ಗೀತೆಯ 'ಅರತಿರ್ಜನ ಸಂಸದಿ' ಎಂಬ ಮಾತಿನ ಛಾಯೆ.

**ದೇಶ ಬಂಧು ಬಾಂಧವರ ಸ್ನೇಹ** – ತನ್ನ ಊರು, ತನ್ನವರು, ತನ್ನ ಹಿರತವರು ಎಂಬ ಅಭಿಮಾನ (ಮಮಕಾರ).

**ನಿಂದಿಸಿದರೆ...** – ಮಾನವನ್ನೂ ಅಪಮಾನವನ್ನೂ ಸಮನಾಗಿ ಕಾಣುವುದು ತಾತ್ಪರ್ಯ ('ಸಮಂ ಮಾನಾಪಮಾನಯೋಃ').

**ಕೋಪ ಬಂದಾಗ...** – 'ನೋದ್ವಿಜೇತ್ ಪ್ರಾಪ್ಯ ಚಾಪ್ರಿಯಂ' ಎಂಬ ಗೀತಾ ವಾಕ್ಯದ ಛಾಯೆ.

**ಒಪ** = ಸಂರಕ್ಷಿಸುವ, ಪ್ರಿಯ

**Classification:** Keerthane
**Ankita:** purandara vittala
**Location:** NA
**Category:** mukti marga, bhakti
**Group Words:** achyuta, Ananta, anumana, rokka, deha, bandhu, sittu, Krishna, bangara, vyapara, sripati, papa, jnana, deepa, mukti, bhakti
**Pravachana:** NA
**Explanation:** NA